ಮಂಗಳೂರು ವಿಶ್ವವಿದ್ಯಾನಿಲಯ
ಕನಕದಾಸ ಅಧ್ಯಯನ ಪೀಠ
ಕನಕದಾಸ ಸಂಶೋಧನಾ ಕೇಂದ್ರ
ಮಂಗಳಗಂಗೋತ್ರಿ – 574199

'ಕನಕ ಸಾಂಸ್ಕೃತಿಕ ನಿಘಂಟು'
ಲೋಕಾರ್ಪಣೆ

'ಕನಕ ಜಯಂತಿ'
ಪ್ರಯುಕ್ತ
'ಕನಕ ಕೀರ್ತನ ಗಂಗೋತ್ರಿ'
ಶೈಕ್ಷಣಿಕ ಸಂಸ್ಥೆಗಳ ಹಾಗೂ ಸಾರ್ವಜನಿಕರ ಸಾಮುದಾಯಿಕ
ಪಾಲ್ಗೊಳ್ಳುವಿಕೆಯ ಕನಕದಾಸರ ಕೀರ್ತನೆಗಳ
ಗಾಯನ ಮತ್ತು ಸಮೂಹ ಗಾಯನ ಕಾರ್ಯಕ್ರಮ



ಉದ್ಘಾಟನೆ : **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್**
ಹಿರಿಯ ವಿದ್ವಾಂಸರು, ಕರ್ನಾಟಕ ಸಂಸ್ಕೃತ ವಿ.ವಿ.ಯ
ವಿಶ್ರಾಂತ ಕುಲಪತಿಗಳು, ಬೆಂಗಳೂರು

ಅಧ್ಯಕ್ಷತೆ : **ಪ್ರೊ. ಪಿ.ಎಲ್. ಧರ್ಮ**
ಕುಲಪತಿಗಳು, ಮಂಗಳೂರು ವಿಶ್ವವಿದ್ಯಾನಿಲಯ

ಶುಭಾಶಂಸನೆ : **ಶ್ರೀ ಸಂತೋಷ್ ಬಿ. ಜಗಲಸಾರ** ಕೆ.ಎ.ಎಸ್(ಹಿರಿಯ ಶ್ರೇಣಿ)
ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ

ಗೌರವ ಉಪಸ್ಥಿತಿ : **ಡಾ. ಎ.ವಿ. ನಾವಡ**
ಪ್ರಧಾನ ಸಂಪಾದಕರು, 'ಕನಕ ಸಾಂಸ್ಕೃತಿಕ ನಿಘಂಟು'

: **ಪ್ರೊ. ಸೋಮಣ್ಣ ಹೊಂಗಳ್ಳಿ**
ಡೀನರು ಕಲಾನಿಕಾಯ ಹಾಗೂ ಹಿರಿಯ ಪ್ರಾಧ್ಯಾಪಕರು
ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂ.ವಿ.ವಿ

24 ನವೆಂಬರ್ 2026, ಮಂಗಳವಾರ ಪೂರ್ವಾಹ್ನ 10.00 ಗಂಟೆಗೆ
ಪ್ರೊ.ಬಿ.ಎ.ವಿವೇಕ ರೈ ವಿಚಾರ ವೇದಿಕೆ, ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿವಿ

ತಮಗೆಲ್ಲರಿಗೂ ಆದರದ ಸ್ವಾಗತ

ಡಾ. ಧನಂಜಯ ಕುಂಬ್ಳೆ
ಸಂಯೋಜಕರು
ಕನಕದಾಸ ಸಂಶೋಧನಾ ಕೇಂದ್ರ

ಕುಲಸಚಿವರು
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ

(ಮಂಗಳೂರು ತಾಲೂಕು ವ್ಯಾಪ್ತಿಯ ಉಳ್ಳಾಲ, ಮಂಗಳೂರು, ಬಂಟ್ವಾಳ, ಪುತ್ತೂರು, ಮೂಲ್ಕಿ, ಮೂಡುಬಿದಿರೆ ಹಾಗು ಗಡಿನಾಡು ಪ್ರದೇಶವಾದ ಮಂಜೇಶ್ವರ, ಕಾಸರಗೋಡು ತಾಲೂಕು ವ್ಯಾಪ್ತಿಯ ಪ್ರೌಢಶಾಲೆ, ಪದವಿಪೂರ್ವ ಕಾಲೇಜುಗಳು ಮತ್ತು ಮಂಗಳೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ ಕಾಲೇಜುಗಳು, ದಕ್ಷಿಣ ಕನ್ನಡ, ಉಡುಪಿ, ಕೊಡಗು ಜಿಲ್ಲೆಯ ವಿಶ್ವೇಶ್ವರಯ್ಯ ತಾಂತ್ರಿಕ ಹಾಗೂ ರಾಜೀವ್ ಗಾಂಧಿ ವೈದ್ಯಕೀಯ ವಿಶ್ವವಿದ್ಯಾನಿಲಯ, ಕಣ್ಣೂರು ವಿಶ್ವವಿದ್ಯಾನಿಲಯ, ಕೇಂದ್ರೀಯ ವಿಶ್ವವಿದ್ಯಾನಿಲಯ ಕಾಸರಗೋಡು ಇಲ್ಲಿನ ಪದವಿ ಮತ್ತು ಸ್ನಾತಕೋತ್ತರ ವಿಭಾಗಗಳ ವಿದ್ಯಾರ್ಥಿಗಳು, ಸಿಬ್ಬಂದಿಗಳು ಹಾಗು ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯ ಸಾರ್ವಜನಿಕರು ಭಾಗವಹಿಸುವ ಸಾಮುದಾಯಿಕ ಪಾಲ್ಗೊಳ್ಳುವಿಕೆಯ ಕಾರ್ಯಕ್ರಮ)

ಕನಕದಾಸ ಅಧ್ಯಯನ ಪೀಠ ಮತ್ತು ಕನಕದಾಸ ಸಂಶೋಧನಾ ಕೇಂದ್ರ

ಕವಿಯಾಗಿ, ದಾರ್ಶನಿಕರಾಗಿ ಮತ್ತು ಸಾಮಾಜಿಕ ಚಿಂತಕರಾಗಿ ಸಮಕಾಲೀನ ಕರ್ನಾಟಕದ ಚರಿತ್ರೆಯಲ್ಲಿ ಕನಕದಾಸರದು ಮಹತ್ವಪೂರ್ಣ ಹೆಸರು. ಅವರ ಬದುಕು ಮತ್ತು ಬರೆಹಗಳ ಅಧ್ಯಯನ ಮತ್ತು ಪ್ರಸರಣದ ಉದ್ದೇಶದಿಂದ ಕರ್ನಾಟಕ ಸರಕಾರ 2003ರಲ್ಲಿ ಕನಕದಾಸ ಅಧ್ಯಯನ ಪೀಠ ಹಾಗೂ 2008ರಲ್ಲಿ ಕನಕದಾಸ ಸಂಶೋಧನ ಕೇಂದ್ರವನ್ನು ಸ್ಥಾಪಿಸಿದೆ. ಕಳೆದ ಇಪ್ಪತ್ತ ಮೂರು ವರ್ಷಗಳಿಂದೀಚೆಗೆ ಕನಕದಾಸ ಅಧ್ಯಯನ ಪೀಠ ಮತ್ತು ಕನಕದಾಸ ಸಂಶೋಧನ ಕೇಂದ್ರ ಕನಕದಾಸರು ಪ್ರತಿನಿಧಿಸುತ್ತಿದ್ದ ಸಾಮಾಜಿಕ ಚಿಂತನೆ ಮತ್ತು ಕಾಳಜಿಗಳನ್ನು ಪಸರಿಸುವ ಮತ್ತು ಜನಪ್ರಿಯಗೊಳಿಸುವ ವೈವಿಧ್ಯಮಯವಾಗಿರುವ ಹಲವಾರು ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ.

ಕನಕದಾಸರ ತತ್ತ್ವಚಿಂತನೆಗಳನ್ನು ಯುವ ಸಮುದಾಯಕ್ಕೆ ತಲುಪಿಸುವ ಆಶಯದಲ್ಲಿ 'ಕನಕ ಚಿಂತನ' ಪ್ರಚಾರೋಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಂಡು ಬರುತ್ತಿದೆ. ಈವರೆಗೆ ಒಟ್ಟು 291 ಪ್ರಚಾರೋಪನ್ಯಾಸಗಳನ್ನು ರಾಜ್ಯ ಮತ್ತು ದೇಶದ ವಿವಿಧೆಡೆ ನೆರವೇರಿಸಿದೆ. ಇದರೊಂದಿಗೆ ಕನಕ ಸಾಹಿತ್ಯ ಸಮ್ಮೇಳನ, ಕನಕಾಭಿಯಾನ, ಕನಕ ಕೀರ್ತನ ಗಾಯನ ಕಮ್ಮಟ, 8 ರಾಷ್ಟ್ರೀಯ, 2 ಅಂತಾರಾಷ್ಟ್ರೀಯ ವಿಚಾರ ಸಂಕಿರಣಗಳನ್ನು ಏರ್ಪಡಿಸಿದೆ. ಇದಲ್ಲದೇ 'ಕನಕ ಸ್ಮೃತಿ' ವಿಶೇಷ ಉಪನ್ಯಾಸ, ಆಕಾಶವಾಣಿ ಪ್ರಾಯೋಜಕತ್ವದೊಂದಿಗೆ ಕನಕ ಕೀರ್ತನ ವ್ಯಾಖ್ಯಾನ–ಅರ್ಥಾನುಸಂಧಾನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿರಂತರ ಏರ್ಪಡಿಸುತ್ತಾ ಬರುತ್ತಿದೆ. ಸಂಶೋಧನ ಕೇಂದ್ರವು ಒಟ್ಟು 8 ಕೃತಿಗಳನ್ನು, ಒಂದು ಧ್ವನಿಸುರುಳಿಯನ್ನು ಪ್ರಕಟಿಸಿದ್ದು, ಇವುಗಳ ಮಾರಾಟದ ವ್ಯವಸ್ಥೆಯನ್ನು ಕೂಡಾ ಕೇಂದ್ರವು ಮಾಡುತ್ತಿದೆ. ಹಿಂದುಳಿದ ಮತ್ತು ಬಡವರ್ಗ ವಿದ್ಯಾರ್ಥಿಗಳಿಗೆ ಶಿಕ್ಷಣ ಮತ್ತು ಔದ್ಯೋಗಿಕ ಕ್ಷೇತ್ರಗಳಿಗೆ ಪ್ರವೇಶಿಸಲು ಅನುಕೂಲವಾಗುವಂತೆ ಕೇಂದ್ರವು ಕಳೆದ ಎರಡು ವರ್ಷಗಳಿಂದ ನುರಿತ ಸಂಪನ್ಮೂಲ ವ್ಯಕ್ತಿಗಳಿಂದ 'ಕನಕ ಕಾಯಕ ದಾಸೋಹ' UGC–NET/SLET/JRJ ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗಳನ್ನು ನಡೆಸಿಕೊಂಡು ಬರುತ್ತಿದೆ. ಕನಕದಾಸರ ಸಮಗ್ರ ಸಾಹಿತ್ಯದ ಓದಿಗೆ ಉಪಯುಕ್ತವಾಗುವ 'ಕನಕ ಸಾಂಸ್ಕೃತಿಕ ನಿಘಂಟ'ನ್ನು ಕೇಂದ್ರವು ಪ್ರಕಟಿಸಿದೆ.

ಕನಕ ಕೀರ್ತನ ಗಂಗೋತ್ರಿ

ಕನಕದಾಸರ ತತ್ವಪದಗಳನ್ನು ವಿದ್ಯಾರ್ಥಿ ಸಮುದಾಯಕ್ಕೆ ಪ್ರಚಾರಪಡಿಸುವ ನಿಟ್ಟಿನಲ್ಲಿ, ಸಾಮುದಾಯಿಕ ಪಾಲ್ಗೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸುವ 'ಕನಕ ಕೀರ್ತನ ಗಂಗೋತ್ರಿ' ಎಂಬ ಕನಕದಾಸರ ಕೀರ್ತನೆಗಳ ಗಾಯನ ಕಾರ್ಯಕ್ರಮವನ್ನು ವೈಯಕ್ತಿಕ ವಿಭಾಗ ಪ್ರೌಢಶಾಲೆ, ಪದವಿಪೂರ್ವ, ಪದವಿ, ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು, ಅಧ್ಯಾಪಕ ಮತ್ತು ಸಮೂಹ ಗಾಯನ ವಿಭಾಗದಲ್ಲಿ ಪದವಿ, ಸಿಬ್ಬಂದಿ, ಸಾರ್ವಜನಿಕ ಮಟ್ಟದಲ್ಲಿ ವಿಶ್ವವಿದ್ಯಾನಿಲಯ ಹಾಗೂ ಅವುಗಳ ಸಂಯೋಜಿತ ಕಾಲೇಜು ಹಾಗೂ ಇತರ ಸಾರ್ವಜನಿಕ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ನಡೆಸಿಕೊಂಡು ಬರುತ್ತಿದೆ. ಈ ಕಾರ್ಯಕ್ರಮದ ಕೀರ್ತನ ಗಾಯನದಲ್ಲಿ ಪ್ರತೀ ವಿಭಾಗದಿಂದ ಆಯ್ಕೆಯಾದ ಮೂರು ಮಂದಿ ಅಭ್ಯರ್ಥಿಗಳಿಗೆ ಮತ್ತು ಸಮೂಹ ಗಾಯನದಲ್ಲಿ ಆಯ್ಕೆಯಾದ ಎರಡು ತಂಡಕ್ಕೆ ಮಂಗಳೂರು ವಿಶ್ವವಿದ್ಯಾನಿಲಯದ ಮಂಗಳಗಂಗೋತ್ರಿಯಲ್ಲಿ ನಡೆಯುವ 'ಕನಕ ಸ್ಮೃತಿ' ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ನಗದು, ಕನಕ ಪುರಸ್ಕಾರ, ಪ್ರಮಾಣ ಪತ್ರಗಳನ್ನು ನೀಡಿ ಗೌರವಿಸಲಾಗುತ್ತದೆ.

ಈ ಗಾಯನ ಕಾರ್ಯಕ್ರಮದಲ್ಲಿ ಭಾಗವಹಿಸಲಿಚ್ಛಿಸುವವರು ಸಂಪರ್ಕಿಸಬಹುದಾದ
ದೂರವಾಣಿ ಸಂಖ್ಯೆ: 8310300875/9632346126
ಇಮೇಲ್: kanakadasaresearchcenter2008@gmail.com